ಈ ಬಜೆಟ್ ಸಂದರ್ಭದಲ್ಲಿ ಮೂರು ಸಂಗತಿಗಳನ್ನು ತಮ್ಮ ಗಮನಕ್ಕೆ ತಂದು ನಾನು ಒಟ್ಟಾರೆ ಶ್ರೀ ಎಸ್.ಎಂ. ಕೃಷ್ಣರವರಿಗೆ, ಯಾರು ಹಣಕಾಸು ಸಚಿವರಾಗಿದ್ದಾರೆ, ಮುಖ್ಯಮಂತ್ರಿಯಾಗಿದ್ದಾರೆ ಒಂದು ಒಳ್ಳೆಯ ಅವಕಾಶವಾಯಿತು....

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇಸ್ಕಾನ್‌ನವರು ಮಕ್ಕಳಿಗೆ ಊಟ ಹಾಕುತ್ತಿದ್ದಾರೆಂದು ತಿಳಿಸಿದಿರಿ. ಅಕ್ಕಿಯನ್ನು ಸರ್ಕಾರ ಸರಬರಾಜು ಮಾಡುತ್ತದೆಯೇ? ಇಲ್ಲವೇ ಅವರೇ ಅಕ್ಕಿ ಖರೀದಿಸಿ ಆಹಾರ ತಯಾರಿಸಿ ಸರಬರಾಜು ಮಾಡುತ್ತಾರಾ?

ಶ್ರೀ ಎಸ್. ಸುರೇಶ್‌ಕುಮಾರ್:- ಈಗ ಸರ್ಕಾರ ಅವರಿಗೆ ಅಕ್ಕಿ ಕೊಡುತ್ತಿದೆ. ಮಕ್ಕಳಿಗೆ ಊಟ ಹಾಕುವ ಕಾರ್ಯಕ್ರಮವನ್ನು ಅವರು ಮೊದಲು ತಾವಾಗೇ ಶುರು ಮಾಡಿದ್ದು.

ಶ್ರೀ ಸಿ.ಸಂಪಂಗಿ:- ಮಾನ್ಯ ಸದಸ್ಯರಾದ ಸುರೇಶ್ ಕುಮಾರ್ ರವರು ಬೆಂಗಳೂರು ವಿಚಾರದಲ್ಲಿ ಎರಡು ಪ್ಯಾರಾಗಳನ್ನು ತೋರಿಸಿ ಪ್ರಸ್ತಾಪಿಸಿದರು. ಅದರಲ್ಲಿ 112ನೇ ಪ್ಯಾರಾ ಬಿಟ್ಟುಬಿಟ್ಟರು. 'ಬೆಂಗಳೂರು ಮೆಟ್ರೊ ರೈಲು' ಪ್ರತಿಷ್ಠಿತ ಯೋಜನೆಯಾಗಿದೆ. ದೆಹಲಿ ಮೆಟ್ರೊ ರೈಲು ನಿಗಮವು ಬೆಂಗಳೂರು ಮೆಟ್ರೊ ರೈಲು ಯೋಜನೆಯ ವರದಿಯನ್ನು ಶೀಘ್ರದಲ್ಲಿಯೇ ಸಲ್ಲಿಸಲಿದೆ. ಪ್ರಸಕ್ತ ವರ್ಷದಲ್ಲಿ ಈ ಯೋಜನೆ ಕಾರ್ಯಾರಂಭ ಮಾಡಲಿದ್ದು, ನಾನು 74 ಕೋಟಿ ರೂಪಾಯಿಗಳ ಅನುದಾನ ಒದಗಿಸುತ್ತಿದ್ದೇನೆ' ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದನ್ನು ಸ್ವಾಗತಿಸಬೇಕಲ್ಲಾ.

ಶ್ರೀ ಎಸ್.ಸುರೇಶ್‌ಕುಮಾರ್:- ಅದನ್ನು ಮಾನ್ಯ ಸದಸ್ಯರಾದ ಸಂಪಂಗಿಯವರು ಓದುತ್ತಾರೆಂದು ನನಗೆ ಗೊತ್ತಿತ್ತು. ಅದಕ್ಕೋಸ್ಕರ ಹಾಗೆಯೇ ಬಿಟ್ಟಿದ್ದೆ! Thank you. ನಾನು ಒಟ್ಟಾರೆ ಇಷ್ಟು ವಿಷಯಗಳನ್ನು ಹೇಳುತ್ತಾ ಒಂದು ಒಳ್ಳೆಯ ಅವಕಾಶವಾಯಿತು. ಇನ್ನೂ ಆಡಳಿತದಲ್ಲಿದ್ದಾರೆ, ಅನೇಕ ಸಂಗತಿಗಳನ್ನು ಹೇಳುತ್ತಿದ್ದಾರೆ. ಹುಮ್ನಾಬಾದ್‌ನಲ್ಲಿ ಬಿದ್ದದ್ದೂ ಕೂಡ ನಮ್ಮ ಸಾಕ್ಷಿಭೂತವೆಂದು ಹೇಳುತ್ತಾರೆ. ಹೀಗಿರುವುದರಿಂದ ಒಂದು ಒಳ್ಳೆಯ ಅವಕಾಶ ಕಳೆದುಕೊಂಡಿದ್ದಾರೆ. ಬಹಳ ಮಿಸ್‌ಲೀಡಿಂಗ್ ಬಜೆಟ್ ಕೊಟ್ಟಿದ್ದಾರೆ. ಹೊಸ ಹೊಸ ಹೆಸರುಗಳನ್ನು ಹಾಕಿ ಜನರಿಗೆ ಕೊಟ್ಟಿದ್ದಾರೆ. ಇದು ಸಂಪೂರ್ಣವಾಗಿ ಯಾವ್ಯಾವುದೋ ಲಾಬಿಗಳಿಗೋಸ್ಕರ ಇರುವ ಬಜೆಟ್ ಎಂದು ಜನಸಾಮಾನ್ಯರು ಪ್ರತಿಕ್ರಿಯಿಸುತ್ತಿರುವ ಹಿನ್ನೆಲೆಯಲ್ಲಿ ಒಳ್ಳೆಯ ಅವಕಾಶವನ್ನು ಈ ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿಗಳು ಕಳೆದುಕೊಂಡಿದ್ದಾರೆಂದು ಹೇಳುತ್ತಾ ಇಷ್ಟು ಹೊತ್ತು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4. ಪ್ರಕಟಣೆ

1. ಪ್ರಶ್ನೋತ್ತರಗಳ ಮಂಡನೆ

ಚೇರ್ಮನ್:- ಈಗ ಒಂದು ಪ್ರಕಟಣೆ ಇದೆ. ದಿನಾಂಕ 27.3.2003ರಂದು ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 15 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 67 ಪ್ರಶ್ನೆಗಳ ಪೈಕಿ 50 ಉತ್ತರಗಳನ್ನು ಹಾಗೂ ದಿನಾಂಕ 28.3.2003ರಂದು ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 60 ಪ್ರಶ್ನೆಗಳ ಪೈಕಿ 49 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಅನುಬಂಧ - 1 ಮತ್ತು 2)

2. ವಿಧಾನ ಪರಿಷತ್ತಿನಿಂದ ಅಂಗೀಕೃತವಾಗಿ ಬಂದಿರುವ ಮಸೂದೆ ಬಗ್ಗೆ.

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 27ನೇ ಮಾರ್ಚ್ 2003ರಂದು ಕರ್ನಾಟಕ ಮೌಲ್ಯವರ್ಧಿತ ತೆರಿಗೆ ವಿಧೇಯಕ, 2003ನ್ನು ತಿದ್ದುಪಡಿಗಳಿಲ್ಲದೆ ವಿಧಾನ ಪರಿಷತ್ತು ಅಂಗೀಕರಿಸಿದೆ".

ಈಗ ಸದನವನ್ನು ಮಧ್ಯಾಹ್ನ 3.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 2 ಗಂಟೆ 2 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ಹೆಚ್. ತಹಸೀಲ್ದಾರ್)ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ಉಪಾಧ್ಯಕ್ಷರು:- ಮಾನ್ಯ ಚನ್ನಿಗಪ್ಪನವರೇ, ತಾವು ಮಾತನಾಡುತ್ತೀರಾ? ಹತ್ತು ನಿಮಿಷ ಅವಧಿ ಮಾತ್ರ ಮಾತನಾಡಬೇಕು. ನಮ್ಮ ಬಳಿ ಈಗ ಜಾಸ್ತಿ ಸಮಯ ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಉಪಾಧ್ಯಕ್ಷರೇ, ಸಹಕಾರಿ ತಿದ್ದುಪಡಿ ಬಗ್ಗೆ ನಮ್ಮದೊಂದು ಖಾಸಗಿ ವಿಧೇಯಕ ಇತ್ತು. ಅದು ಚರ್ಚೆ ಬರಲೇ ಇಲ್ಲವಲ್ಲ.

ಉಪಾಧ್ಯಕ್ಷರು:- ಅದನ್ನು ಇದಾದ ಮೇಲೆ ತೆಗೆದುಕೊಳ್ಳುತ್ತೇವೆ. ಈಗ ಮಾನ್ಯ ಚನ್ನಿಗಪ್ಪನವರು ಮಾತನಾಡಬಹುದು.

5. ವಿತ್ತೀಯ ಕಾರ್ಯಕಲಾಪ

2003-04ನೇ ಸಾಲಿನ ಆಯವ್ಯಯ ಪತ್ರದ ಮೇಲಿನ ಮುಂದುವರೆದ ಚರ್ಚೆ

+ಶ್ರೀ ಸಿ.ಚನ್ನಿಗಪ್ಪ (ಕೊರಟಗೆರೆ):- ಮಾನ್ಯ ಉಪಾಧ್ಯಕ್ಷರೇ, ಈ ವರ್ಷದ ಆಯವ್ಯಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸರ್ಕಾರದ ಯೋಜನೆ ಮತ್ತು ಅಭಿವೃದ್ಧಿಯ ಬಗ್ಗೆ ತಮ್ಮದೇ ಆದಂತಹ ಒಂದು ತತ್ವವನ್ನಿಟ್ಟುಕೊಂಡು ರಾಜ್ಯದ ಜನತೆಯ ಗಮನಕ್ಕೆ ಇವತ್ತು ಪ್ರಕಟಣೆ ಮಾಡಿದ್ದಾರೆ. ಮೊಟ್ಟಮೊದಲನೆಯದಾಗಿ ಅವರು ರಾಜ್ಯದಲ್ಲಿ ಬರಗಾಲ ಬಂದಿದೆ, ದುರಾದೃಷ್ಟವಶಾತ್ ಬಾಕಿಯೆಲ್ಲಾ ಸಾರ್ವಜನಿಕ ಕೆಲಸಗಳು ಕುಂಠಿತವಾಗಿದೆ ರಾಜ್ಯದ ಆಯವ್ಯಯದಲ್ಲಿ ಹೇಳಿದ್ದಾರೆ. ಕೇಂದ್ರ ಸರ್ಕಾರದ 60 ಪರ್ಸೆಂಟ್ ಹಣ ಮತ್ತು ರಾಜ್ಯ ಸರ್ಕಾರದ 40 ಪರ್ಸೆಂಟ್ ಹಣದಲ್ಲಿ ಬರ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ. ಸಂಪೂರ್ಣವಾಗಿ ರಾಜ್ಯ ಸರ್ಕಾರದ ವತಿಯಿಂದ ಬರಗಾಲ ಪರಿಹಾರ ಕಾಮಗಾರಿಗಳ ಯಾವುದೇ ಕೆಲಸಗಳನ್ನು ಸಮರ್ಪಕವಾಗಿ ಮಾಡುವುದಕ್ಕಾಗಿಲ್ಲ. ಉದಾಹರಣೆಗೆ ಹೇಳುವುದಾದರೆ, ಕುಡಿಯುವ ನೀರು ಒದಗಿಸುವ ಬಗ್ಗೆ ಮತ್ತು ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಬಗ್ಗೆ ಈ ಸರ್ಕಾರದವರು ಏನೊಂದು ಧ್ಯೇಯವನ್ನಿಟ್ಟುಕೊಂಡಿದ್ದರೋ, ಅದನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕಾಗಿಲ್ಲ. ಶಾಸಕರ ನಿಧಿಯಿಂದ 29.10 ಕೋಟಿ ರೂಪಾಯಿಗಳನ್ನು ಪಡೆದುಕೊಂಡು, ಕೇಂದ್ರದಿಂದ ಸುಮಾರು 60 ಪರ್ಸೆಂಟ್ ಹಣ ಪಡೆದುಕೊಂಡು, ರಾಜ್ಯದ ಪಾಲಿನ ಸುಮಾರು 10 ಪರ್ಸೆಂಟ್ ಹಾಕಿಕೊಂಡು ಇವತ್ತು ಬರ ಪರಿಹಾರ ಕಾಮಗಾರಿಗಳನ್ನು ಮಾಡಿದ್ದಾರೆ. ಇವತ್ತು ರಾಜ್ಯದ